
> ಮನ್ಯಾಗ ನಂದು ಸ್ವಯಂ ರಾಜಿಕಿರೀ. ಮದುವ್ಯಾದ ಮ್ಯಾಲೆನೂ ಭಜನಿ ಮಾಡವ್ರಲ್ಲಿ ಹೋಗಿ ಕುಂದ್ರಾಕಿ. ಸಾಲ್ಯಾಗ ಕರದ್ರೆ ಹೋಗಿ ಹಾಡಾಕಿ. ಎಲ್ಲಿಗೆ ಹೋದ್ರೂ ನನ ಗಂಡ ಎಂದೂ ಬ್ಯಾಡ ಅಂದಾತಲ್ಲ. ನಾನು ಹಾಡದಂದ್ರೆ ಅತಗ ಅಷ್ಟು ಹಿಗ್ಗು. ನನಗ ಪ್ರಶಸ್ತಿ ಬಂದ್ರೆ ಅದನ್ನು ದೋಸ್ತರಿಗಿ ತೋರಸಾಕಂತ ತಾನು ನೌಕರಿ ಮಾಡತಿದ್ದ ಕೊಪ್ಪಳಕ್ಕೇ ಒಯ್ದು ಇಟಕಂಡ.



ಹೋಗಿ ಕುಂದ್ರಾಕಿ. ಸಾಲ್ಯಾಗ ಕರದ್ರೆ ಹೋಗಿ ಹಾಡಾಕಿ. ಎಲ್ಲಿಗೆ ಹೋದ್ರೂ ನನ ಗಂಡ ಎಂದೂ ಬ್ಯಾಡ ಅಂದಾತಲ್ಲ. ನಾನು ಹಾಡದಂದ್ರೆ ಅತಗ ಅಷ್ಟು ಹಿಗ್ಗು. ನನಗ ಪ್ರಶಸ್ತಿ ಬಂದ್ರೆ ಅದನ್ನು ದೋಸ್ತರಿಗಿ ತೋರಸಾಕಂತ ತಾನು ನೌಕರಿ ಮಾಡತಿದ್ದ ಕೊಪ್ಪಳಕ್ಕೇ ಒಯ್ದು ಇಟಕಂಡ. ಅಲ್ಲಿ ಅದನ್ನು ನೋಡಿದ ದ್ಯಾವಣ್ಣ ಮಾಸ್ತ್ರು ನನ್ನ ಕರಿಸಿಗೆಂಡು, ನನ್ನಿಂದ ಪದ ಹಾಡಿಸಿ ಬರಕಂಡ್ರು.

**◆ ಅಲ್ಲಮ್ಮ ಚೊಲೋ ಗಂಡ ಸಿಕ್ಕ ಸರೆ ಹೋಯ್ತು. ಹಾಡದು ಬ್ಯಾಡ ಅಂಬ ಗಂಡ ಸಿಕ್ಕಿದ್ರೆ ಏನ್ ಮಾಡತಿದ್ದೆಮ್ಮ?**

ಅಂಗಂತ ಕಲ್ತುವೆಲ್ಲ ಮುಚ್ಚಿಡಂದೇನು, ನಾನು ಮಾತ್ರ ಹಾಡದು ಬುಡದಿಲ್ಲ ಅಂತಿದ್ದಿನ್ರಿ.

**◆ ಯಾವ್ಯಾವ ಪದ ಹಾಡ್ತೆಮ್ಮ ನೀನು?**

ಕುಟ್ಟೋ ಪದ, ಬೀಸೋ ಪದ, ಯಲ್ಲಮ್ಮನ ಪದ, ನೀರು ಹಾಕ ಪದ, ಕುಂಬಾರ ಮನೀಗೆ ಹೈರಾಣಿ ತರಾಕ ಹೋಗುವಾಗಿನ ಪದ, ಮೈನೆರೆದಾಗ ಹಾಡೋ ಪದ, ಜೋಕುಮಾರನ ಪದ, ಮುತ್ತೈದೇರ ಪದ, ಒಳ್ಳುಪೂಜೆ ಪದ, ಮಂಗಳಾರತಿ ಪದ, ಸೋಬಾನ ಪದ, ಹಂತಿ ಪದ ಎಲ್ಲ ಹಾಡ್ತಿನ್ರೀ.

**◆ ಹಂತಿ ಪದ ಗಣಮಕ್ಕಳೇ ಹಾಡ್ತಾರಲ್ಲಮ್ಮ ಜಾಸ್ತಿ?**

ಹೊಲದಾಗ ಹಂತಿ ಕಟ್ಟಿದಾಗ ನಮ್ಮಪ್ಪನೋರ ಹಿಂದ ಹೋಗ್ತಿದ್ಯಲ್ಲರಿ. ಇವು ಗಣಮಕ್ಕಳು ಹಾಡವು, ಇವು ಹೆಣಮಕ್ಕಳಷ್ಟೇ ಹಾಡವು ಅಂತ ಏನೂ ಗೊತ್ತಾಗ್ಲಾರದಾಗ ಹಂಗೇ ಕಲ್ತುಕಂಬುಟ್ಟೆರಿ. ಏನಂದ್ರೆ ಕಿವಿ ಮ್ಯಾಗ ಬಿದ್ದ ಎಲ್ಲ ಪದಗಳನ್ನೂ ಹಿಡಕಬೇಕಂಬ ಅಪೇಕ್ಷ ಇತ್ತು ನನಗ. ಹಂಗಾಗಿ ಅವೂ ಕಲ್ತುಕಂಡೀನ್ರೀ.